# ಯೇಸುಕ್ರಿಸ್ತನು ಪರ್ವತದ ಮೇಲೆ ಮಾಡಿದ ಉಪದೇಶ

**[ಹೊಸ ಒಡಂಬಡಿಕೆ(New Testament)ಯಿಂದ ಸಂಗ್ರಹ]**

**ಯೇ**ಸು ಗಲಿಲೇಯ ಪ್ರಾಂತದಲ್ಲಿ ಸಂಚರಿಸುತ್ತಿದ್ದಾಗ, ಅನೇಕ ಸಭಾಮಂದಿರಗಳಲ್ಲಿ ಬೋಧಿಸುತ್ತಿದ್ದನು ಮತ್ತು ಅನೇಕ ಜನರ ಕಾಯಿಲೆಗಳನ್ನು ವಾಸಿಮಾಡುತ್ತಿದ್ದನು. ಅವನ ಕೀರ್ತಿ ಎಲ್ಲೆಡೆಗೂ ಹಬ್ಬಿತು. ಸಾವಿರಾರು ಜನ ಅವನನ್ನು ನೋಡಲು ಬಂದರು. ಈ ಅಪಾರ ಜನಸಮೂಹವನ್ನು ನೋಡಿ, ಒಂದು ಬೆಟ್ಟದ ಮೇಲೆ ಹೋಗಿ ಕುಳಿತುಕೊಂಡು ಹೀಗೆ ಉಪದೇಶ ಮಾಡಿದನು:

"ಅಹಂಕಾರವಿಲ್ಲದವರೇ ಧನ್ಯರು. ಪರಲೋಕ ರಾಜ್ಯ ಅವರದು. ಈಗ ದುಃಖಪಡುತ್ತಿರುವ ಜನರೇ ಧನ್ಯರು. ದೇವರು ಭರವಸೆ ಇತ್ತಿರುವ ಪರಲೋಕವನ್ನು ಅವರು ಹೊಂದುವರು. ದೀನ ಜನರೇ ಧನ್ಯರು. ದೇವರು ಭರವಸೆ ಇತ್ತಿರುವ ಪರಲೋಕವನ್ನು ಅವರು ಹೊಂದುವರು. ಒಳ್ಳೆಯದನ್ನು ಮಾಡಬೇಕೆನ್ನುವ ಇಚ್ಛೆಯುಳ್ಳ ಜನರೇ ಧನ್ಯರು. ದೇವರು ಅವರನ್ನು ಪೂರ್ಣ ತೃಪ್ತಿಪಡಿಸುವನು. ಬೇರೆಯವರಿಗೆ ಕರುಣೆ ತೋರುವ ಜನರೇ ಧನ್ಯರು, ಅವರು ದೇವರೊಂದಿಗೆ ಇರುವರು. ಪರಿಶುದ್ಧಭಾವವುಳ್ಳ ಜನರೇ ಧನ್ಯರು. ಅವರು ದೇವರೊಂದಿಗೆ ಇರುವರು. ಇತರರಿಗೆ ಸಮಾಧಾನ ನೀಡುವ ಜನರೇ ಧನ್ಯರು. ಅವರು 'ದೇವರ ಮಕ್ಕಳು' ಎನಿಸಿಕೊಳ್ಳುವರು. ಒಳ್ಳೆಯದನ್ನು ಮಾಡುವುದಕ್ಕಾಗಿ ಕಷ್ಟವನ್ನು ಅನುಭವಿಸುವ ಜನರೇ ಧನ್ಯರು. ಏಕೆಂದರೆ ಪರಲೋಕ ಅವರದಾಗುವುದು.

"ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಜನರು ದೀಪವನ್ನು ಮೇಜಿನ ಮೇಲೆ ಇಡುವರು. ಆಗ ಅದು ಮನೆಯಲ್ಲಿ ಇರುವವರೆಲ್ಲರಿಗೂ ಬೆಳಕು ನೀಡುವುದು. ಅದೇ ರೀತಿ ನೀವೂ ಕೂಡ ಬೇರೆಯವರಿಗೆ ಬೆಳಕಾಗಬೇಕು. ನೀವು ಮಾಡುವ ಒಳ್ಳೆಯ ಕಾರ್ಯಗಳನ್ನು ಜನರು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯಾದ ಭಗವಂತನನ್ನು ಕೊಂಡಾಡುವಂತೆ ನಿಮ್ಮ ಜೀವನವನ್ನು ಬಾಳಬೇಕು.

"ನಿನ್ನ ಸ್ನೇಹಿತರನ್ನು ಪ್ರೀತಿಸು ಮತ್ತು ನಿನ್ನ ಶತ್ರುಗಳನ್ನು ದ್ವೇಷಿಸು ಎಂದು ಹೇಳಿರುವುದನ್ನು ನೀವು ಕೇಳಿದ್ದೀರಿ. ಆದರೆ ನಾನು ನಿಮಗೆ ಹೇಳುವುದೇನೆಂದರೆ ನಿಮ್ಮ ಶತ್ರುಗಳನ್ನು ಪ್ರೀತಿಸಿರಿ, ನಿಮಗೆ ಕೆಟ್ಟದನ್ನು ಮಾಡುವ ಜನರಿಗಾಗಿ ಪ್ರಾರ್ಥಿಸಿರಿ. ಆಗ ಮಾತ್ರ ನೀವು ಪರಲೋಕದಲ್ಲಿರುವ ನಿಮ್ಮ ತಂದೆಯ ನಿಜವಾದ ಮಕ್ಕಳಾಗುವಿರಿ.

"ಎಚ್ಚರವಾಗಿರಿ! ಒಳ್ಳೆಯ ಕಾರ್ಯಗಳನ್ನು ಎಲ್ಲರ ಮುಂದೆ ಪ್ರದರ್ಶಿಸಬೇಡಿ. ಜನರು ನೋಡಲೆಂದು ನೀವು ಅವುಗಳನ್ನು ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯಿಂದ ನಿಮಗೆ ಪ್ರತಿಫಲ ದೊರೆಯುವುದಿಲ್ಲ. ...ಆದ್ದರಿಂದ ನೀವು ಬಡಜನರಿಗೆ ದಾನ ಕೊಡುವಾಗ ಬಹಳ ಗುಟ್ಟಾಗಿ ಕೊಡಿ. ನೀವು ದಾನ ಮಾಡುವುದು ಯಾರಿಗೂ ತಿಳಿಯದಿರಲಿ.

"ನೀವು ಪ್ರಾರ್ಥಿಸುವಾಗ ಕಪಟಿಗಳ ಹಾಗೆ ಪ್ರಾರ್ಥಿಸಬೇಡಿ... ನೀವು ಕೇಳುವುದಕ್ಕೆ ಮೊದಲೇ ನಿಮಗೆ ಏನೇನು ಬೇಕು ಎಂಬುದು ನಿಮ್ಮ ತಂದೆಗೆ ತಿಳಿದಿದೆ.

"...ಬೇರೆಯವರು ನಿಮಗೆ ಮಾಡಿದ ತಪ್ಪುಗಳನ್ನು ನೀವು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯೂ ನಿಮ್ಮ ತಪ್ಪುಗಳನ್ನು ಕ್ಷಮಿಸುತ್ತಾನೆ. ಅದಕ್ಕೆ ಬದಲಾಗಿ, ಜನರು ನಿಮಗೆ ಮಾಡಿದ ತಪ್ಪುಗಳನ್ನು ನೀವು ಕ್ಷಮಿಸದಿದ್ದರೆ, ಪರಲೋಕದಲ್ಲಿರುವ ನಿಮ್ಮ ತಂದೆಯು ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವುದಿಲ್ಲ.

"ನಿಮಗೋಸ್ಕರ ಈ ಭೂಮಿಯ ಮೇಲೆ ಸಂಪತ್ತನ್ನು ಸಂಗ್ರಹಿಸಬೇಡಿ. ಭೂಮಿಯ ಮೇಲಿರುವ ಸಂಪತ್ತೆಲ್ಲ ಕಿಲುಬು ಹತ್ತಿ ಹಾಳಾಗುತ್ತದೆ. ಕಳ್ಳರು ನಿಮ್ಮ ಮನೆಯೊಳಗೆ ಕನ್ನ ಕೊರೆದು ನಿಮ್ಮಲ್ಲಿ ಇರುವುದನ್ನೆಲ್ಲ ಕದಿಯಬಲ್ಲರು. ಆದ್ದರಿಂದ ನಿಮ್ಮ ಸಂಪತ್ತನ್ನು ಪರಲೋಕದಲ್ಲಿ ಸಂಗ್ರಹಿಸಿಟ್ಟುಕೊಳ್ಳಿ. ಅಲ್ಲಿರುವ ಸಂಪತ್ತಿಗೆ ನುಸಿ ಹಿಡಿಯುವುದಿಲ್ಲ, ಕಳ್ಳರ ಭಯವಿಲ್ಲ.

"ಯಾವನೂ ಕೂಡ ಇಬ್ಬರು ಯಜಮಾನರಿಗೆ ಒಂದೇ ಸಮಯದಲ್ಲಿ ಸೇವೆ ಮಾಡಲಾರನು. ಅವನು ಒಬ್ಬನನ್ನು ಪ್ರೀತಿಸುತ್ತಾನೆ, ಮತ್ತೊಬ್ಬನನ್ನು ದ್ವೇಷಿಸುತ್ತಾನೆ. ಒಬ್ಬನನ್ನು ಹಿಂಬಾಲಿಸುತ್ತಾನೆ, ಮತ್ತೊಬ್ಬನನ್ನು ಹಿಂಬಾಲಿಸುವುದಿಲ್ಲ. ಅದೇ ರೀತಿ ಹಣ ಮತ್ತು ದೇವರ ವಿಷಯದಲ್ಲಿಯೂ ಕೂಡ. ನೀವು ಹಣಕ್ಕೆ ಮತ್ತು ದೇವರಿಗೆ ಒಂದೇ ಸಮಯದಲ್ಲಿ ದಾಸರಾಗಿ ಸೇವೆ ಮಾಡಲಾರಿರಿ.

"ನಾನು ಏನು ತಿನ್ನಬೇಕು? ನಾನು ಏನು ಕುಡಿಯಬೇಕು? ಏನನ್ನು ಉಡಬೇಕು? ಎಂದು ಚಿಂತಿಸಬೇಡಿ. ಹೀಗೆ ಚಿಂತಿಸುವ ಜನರು ದೇವರನ್ನು ಅರಿಯದವರು. ಈ ವಸ್ತುಗಳು ನಿಮಗೆ ಅಗತ್ಯವೆಂದು ಪರಲೋಕದಲ್ಲಿರುವ ನಿಮ್ಮ ತಂದೆಯಾದ ದೇವರಿಗೆ ಗೊತ್ತಿದೆ. ಆದ್ದರಿಂದ ಅವುಗಳಿಗಾಗಿ ಚಿಂತಿಸಬೇಡಿ. ಅದಕ್ಕೆ ಬದಲಾಗಿ ನೀವು ದೇವರ ರಾಜ್ಯವನ್ನು ಸೇರಲು ಮತ್ತು ದೇವರ ಇಚ್ಛೆಗೆ ಅನುಸಾರವಾಗಿ ಎಲ್ಲ ಕಾರ್ಯಗಳನ್ನು ಮಾಡಲು ತವಕಿಸುತ್ತಿರಬೇಕು. ಆಗಲೇ ನಿಮಗೆ ಅಗತ್ಯವಾದ ಉಳಿದೆಲ್ಲ ಅವಶ್ಯಕತೆಗಳನ್ನೂ ದೇವರು ಪೂರೈಸುವನು. ಆದ್ದರಿಂದ ನಾಳೆಗಾಗಿ ಚಿಂತಿಸಬೇಡಿ. ಪ್ರತಿದಿನವೂ ತನ್ನದೇ ಆದ ಎಷ್ಟೋ ಕಷ್ಟಗಳನ್ನು ಹೊಂದಿರುತ್ತದೆ. ನಾಳೆ ಕೂಡ ಅದರದೇ ಆದ ಚಿಂತೆಗಳನ್ನು ಹೊಂದಿರುತ್ತದೆ.

"ಬೇಡಿಕೊಳ್ಳಿರಿ, ಆಗ ದೇವರು ನಿಮಗೆ ಕೊಡುತ್ತಾನೆ. ಹುಡುಕಿರಿ. ಆಗ ನೀವು ಕಂಡುಕೊಳ್ಳುವಿರಿ. ಬಾಗಿಲು ತಟ್ಟಿರಿ, ಆಗ ಅದು ನಿಮಗೆ ತೆರೆದುಕೊಳ್ಳುತ್ತದೆ. ಹೌದು, ಕೇಳುತ್ತ ಇರುವವನು ಮಾತ್ರ ಪಡೆದುಕೊಳ್ಳುತ್ತಾನೆ. ಹುಡುಕುತ್ತ ಇರುವವನು ಮಾತ್ರ ಕಂಡುಕೊಳ್ಳುತ್ತಾನೆ. ತಟ್ಟುತ್ತ ಇರುವವನಿಗೆ ಮಾತ್ರ ಬಾಗಿಲು ತೆರೆದುಕೊಳ್ಳುತ್ತದೆ.

"ನಿಮಗೆ ಬೇರೆಯವರು ಏನನ್ನು ಮಾಡಬೇಕೆಂದು ನೀವು ಆಶಿಸುತ್ತೀರೋ, ಅದನ್ನೇ ಅವರಿಗೂ ಮಾಡಿರಿ. ಇದೇ ಮೋಶೆಸನ ಧರ್ಮ. ಇದೇ ಎಲ್ಲ ಶಾಸ್ತ್ರಗಳ ಮತ್ತು ಎಲ್ಲ ಪ್ರವಾದಿಗಳ ಬೋಧನೆಯ ಸಾರಾಂಶ."